# ದಿವ್ಯಾಂಬರ ಸಂಚಾರಿ

ಜೂನ್ 15ರ ನಸುಕಿನಲ್ಲಿ ಕೊನೆಯುಸಿರೆಳೆದ ನಟ ಸಂಚಾರಿ ವಿಜಯ್, ನಟನೆಯ ಜೊತೆಗೆ ಸಾಮಾಜಿಕ ಜವಾಬ್ದಾರಿಗಳನ್ನೂ ಹೆಗಲ ಮೇಲೆ ಹೊತ್ತುಕೊಂಡು ನಡೆಯುತ್ತಿದ್ದವರು. ಇಂಟರ್‌ವಲ್‌ನಲ್ಲಿ ತನ್ನ ಜೊತೆಗಾರರಿಗೂ ಹೇಳದೆ ಎದ್ದುಹೋಗಿಬಿಟ್ಟ ಪ್ರೇಕ್ಷಕನಂತೆ ಹೊರಟು ಹೋದ ವಿಜಯ್ ಕೂತಿದ್ದ ಸೀಟು ಬಹುಕಾಲ ಖಾಲಿಯೇ ಉಳಿದಿರುತ್ತದೆ.

■ ಪದ್ಮನಾಭ ಭಟ್

**2014** ಮೇ 3. ದೆಹಲಿಯಲ್ಲಿ ಸಿನಿಮಾ ರಾಷ್ಟ್ರಪ್ರಶಸ್ತಿ ಪ್ರದಾನ ಸಮಾರಂಭ. 'ಅತ್ಯುತ್ತಮ ನಟ' ಪ್ರಶಸ್ತಿ ಪ್ರದಾನದ ಸಮಯ ಬಂದಾಗ ಅಲ್ಲಿ ಕೂತಿದ್ದ ಗಣ್ಯಾತಿಗಣ್ಯರ ಕಣ್ಣುಗಳು ಕುತೂಹಲದಿಂದ ಕಿರಿದಾಗಿದ್ದವು. ಗುಂಡು ಮುಖದ, ದಪ್ಪ ಮೂಗಿನ, ಹೊಳೆಯುವ ಕಣ್ಣುಗಳ ಆ ಹುಡುಗ ವೇದಿಕೆಯ ಮೇಲೆ ಬಂದು ರಾಷ್ಟ್ರಪತಿಗಳಿಂದ ಪ್ರಶಸ್ತಿ ಪಡೆದು ನಗುತ್ತ ನಿಂತಾಗ, ಅದನ್ನು ನೋಡುತ್ತಿದ್ದವರ ಹಣೆಯ ಮೇಲೆ ಅಚ್ಚರಿಯ ನೆರಿಗೆಗಳು ಮೂಡಿದ್ದವು.

ಅವರ ಕುತೂಹಲ, ಅಚ್ಚರಿಗಳಿಗೆ ಖಂಡಿತ ಕಾರಣವಿತ್ತು. ಆ ವರ್ಷದ 'ಅತ್ಯುತ್ತಮ ನಟ' ಪ್ರಶಸ್ತಿಯ ಕಣದಲ್ಲಿ ಇದ್ದವರು ಸಾಮಾನ್ಯರಾಗಿರಲಿಲ್ಲ. 'ಪಿಕೆ' ಸಿನಿಮಾದ ನಟನೆಗಾಗಿ ಅಮೀರ್ ಖಾನ್, 'ಹೈದರ್'ನಲ್ಲಿ ಅಬ್ಬರಿಸಿದ್ದ ಶಾಹೀದ್ ಕಪೂರ್, ಮುಮ್ಮುಟ್ಟಿ ಹೀಗೆ ಅಪಾರ ಜನಪ್ರಿಯತೆಯನ್ನೂ ಅನುಭವವನ್ನೂ ಹೊಂದಿರುವ ತಾರಾನಟರಿದ್ದರು. ಆದರೆ ಪ್ರಶಸ್ತಿ ಮಾತ್ರ ಇದುವರೆಗೆ ರಾಷ್ಟ್ರಮಟ್ಟದಲ್ಲಿ ತೀರಾ ಅಪರಿಚಿತನಾದ, ಹೆಸರೇ ಕೇಳಿರದ ಒಬ್ಬ ಕನ್ನಡದ ಹುಡುಗನನ್ನು ಅರಸಿಕೊಂಡು ಬಂದಿತ್ತು.

ಆ ಹುಡುಗ ಸಂಚಾರಿ ವಿಜಯ್!

'ನಾನು ಅವನಲ್ಲ ಅವಳು' ಸಿನಿಮಾದ ನಟನೆಗಾಗಿ ಕನ್ನಡಕ್ಕೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟ ಸಂಚಾರಿ ವಿಜಯ್, ಚಿಕ್ಕಮಗಳೂರು ಜಿಲ್ಲೆಯ, ಕಡೂರು ತಾಲ್ಲೂಕಿನ, ಸಿಂಗಟಗೆರೆ ಹೋಬಳಿಯ, ರಂಗಾಪುರದವರು.

ವಿಜಯ್ ನಟನೆ ಆರಂಭಿಸಿದ್ದು ರಂಗಭೂಮಿಯ ಮೂಲಕ. ದಶಕದ ಕಾಲ 'ಸಂಚಾರಿ' ರಂಗತಂಡದೊಡನೆ ಕೆಲಸ ಮಾಡಿದ ವಿಜಯ್ ಅವರ ಹೆಸರು ಮತ್ತು ಪ್ರತಿಭೆ ಎರಡರ ಅಸ್ಮಿತೆಯ ಗುರುತಾಗಿಯೂ 'ಸಂಚಾರಿ' ಅಂಟಿಕೊಂಡಿತು. ಇಪ್ಪತ್ತು ನಾಟಕಗಳಲ್ಲಿ ಅಭಿನಯಿಸಿರುವ ಅವರು ಎರಡು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಕಿರುತೆರೆಯಲ್ಲಿಯೂ ಹಲವು ಧಾರಾವಾಹಿಗಳಲ್ಲಿ ನಟಿಸಿದ್ದ ವಿಜಯ್ ಸಿನಿಮಾರಂಗ ಪ್ರವೇಶಿಸಿದ್ದು, 2011ರಲ್ಲಿ 'ರಂಗಪ್ಪ ಹೋಗ್ಬಿಟ್ನಾ' ಸಿನಿಮಾದ ಮೂಲಕ.

2014ರಲ್ಲಿ ಮಂಸೋರೆ ನಿರ್ದೇಶನದ 'ಹರಿವು' ಸಿನಿಮಾದಲ್ಲಿನ ಪಾತ್ರ ಅವರ ನಟನಾಪ್ರತಿಭೆಯನ್ನು ಉಜ್ವಲವಾಗಿ ತೋರಿಸಿತು. ಅದೇ ವರ್ಷ ಪ್ರಕಾಶ್ ರೈ ನಿರ್ದೇಶನದ 'ಒಗ್ಗರಣೆ' ಸಿನಿಮಾದಲ್ಲಿ ನಿರ್ವಹಿಸಿದ ಟ್ರಾನ್ಸ್‌ಜೆಂಡರ್‌ನ ಪುಟ್ಟ ಪಾತ್ರ 'ನಾನು ಅವನಲ್ಲ ಅವಳು' ಸಿನಿಮಾದಲ್ಲಿ ನಟಿಸುವ ಅವಕಾಶ ಕೊಟ್ಟಿತು.

ರಾಷ್ಟ್ರಪ್ರಶಸ್ತಿ ನಂತರ ವಿಜಯ್‌ಗೆ ಹಲವು ಸಿನಿಮಾಗಳಲ್ಲಿ ನಟಿಸುವ ಅವಕಾಶಗಳು ಬಂದವು. ಅವರೂ ಕಮರ್ಷಿಯಲ್ ಹೀರೊ ಆಗಿ ಗುರ್ತಿಸಿಕೊಳ್ಳುವ ಹಂಬಲಕ್ಕೆ ಬಿದ್ದಂತೆ ಒಂದಾದ ಮೇಲೆ ಒಂದು ಸಿನಿಮಾಗಳನ್ನು ಒಪ್ಪಿಕೊಳ್ಳುತ್ತ ಹೋದರು. ಆದರೆ ಅವುಗಳಲ್ಲಿ ನಿಜವಾಗಿಯೂ ಅವರ ಅಭಿನಯ ಪ್ರತಿಭೆಯನ್ನು ಉಜ್ವಲವಾಗಿ ತೋರಿಸಿದ ಸಿನಿಮಾಗಳು ಕೆಲವು ಮಾತ್ರ.

ವಿಜಯ್ ವ್ಯಕ್ತಿತ್ವಕ್ಕೆ ಬರಿ ನಟನೆಯ ಆಯಾಮ ಮಾತ್ರ

